ಶ್ರೀ ಎಂ. ವೀರಪ್ಪ ಮೊಯಿಲಿ —ಇವರಿಗೆ ಪ್ರಮೋಷನ್ ಕೊಟ್ಟಿದ್ದರಿಂದಲೇ ಈ ಪ್ರಶ್ನೆ ಉದ್ಭವವಾಗಿದೆ. ಮಾನ್ಯ ಸದಸ್ಯರು ಈಗ ತಾನೆ ಇದರ ಬಗ್ಗೆ ಆಪಾದನೆ ಮಾಡಿದ್ದಾರೆ. ಈಗಾಗಲೇ ನಾವು ಮೈಸೂರು ಮತ್ತು ತುಮಕೂರು ಜಿಲ್ಲಾಧಿಕಾರಿಗಳಿಗೆ ಬರೆದು ವಿಚಾರಣೆ ಮಾಡಲು ತಿಳಿಸಿದ್ದೇವೆ. ಇಷ್ಟರವರೆಗೆ ಇವರು ಪಡೆದಿರುವ ಸರ್ಟಿಫಿಕೇಟ್ ಸುಳ್ಳು ಎಂದು ಸಾಬೀತು ಆಗಿಲ್ಲ. The enquiry report will have to come. Otherwise we cannot take action. Since the Hon'ble Member has sent a letter, we have taken action immediately for investigation. We have requested the Deputy Commissioners of Bangalore and Tumkur to expedite the matter. *Prime facie* we cannot hold that it is a forged certificate or a false certificate, unless some report comes.

ಶ್ರೀ ಪಟೇಲ್ ಪಾಪಾ ನಾಯಕ್.—ಈಗ ಇದರಿಂದ ಎಷ್ಟು ಜನಗಳಿಗೆ ಅನ್ಯಾಯವಾಗುತ್ತದೆ ಎಂಬುದನ್ನು ನೋಡಿ. ಈ ಬಗ್ಗೆ ಜಾಗ್ರತೆಯಾಗಿ ವರದಿಯನ್ನು ತರಿಸಿಕೊಂಡು ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ ಆ ವರದಿಯನ್ನು ನಾವು ತರಿಸಿ ನೋಡುತ್ತೇವೆ ಅವರ ಹೇಳಿರತಕ್ಕಂಥ ಆಪಾದನೆಗಳು ಸತ್ಯವಾದರೆ ತಪ್ಪಿತಸ್ಥರ ಮೇಲೆ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ

MR. SPEAKER.—We will go to the next Calling attention. Hon. Members Sri H. Gangadharan, Bhavurao Deshpande, Michael B. Fernandez, J H. Patel and A. Lakshmisagar to call the attention of the Minister for Education.

ಶ್ರೀ ಎಚ್. ಗಂಗಾಧರನ್. — ಮಾನ್ಯ ಅಧ್ಯಕ್ಷರೇ, ಚಾಮರಾಜಪೇಟೆಯಲ್ಲಿ ಸ್ತ್ರೀ ಸಮಾಜದವರಿಗೆ ಕಿರುಕುಳ ಕೊಡಲಾಗಿದೆ, ಇದರಿಂದ ಹಾಸ್ಟಲ್ ವಿದ್ಯಾರ್ಥಿಗಳಿಗೆ ಉಂಟಾಗಿರತಕ್ಕಂಥ ತೊಂದರೆಯ ಬಗ್ಗೆ ನಾನು ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಇದು ಸಮಾಜ ಕಲ್ಯಾಣ ಇಲಾಖೆಗೆ ಬರುವುದಿಲ್ಲ ಇದು ಎಜುಕೇಷನ್ ಇಲಾಖೆಗೆ ಬರುತ್ತದೆ.

SRI G. B. SHANKARA RAO —Sir, in this connection, I require further details. Today only their matter has come to us.

MR. SPEAKER.—Shall we take it up tomorrow ?

SRI G. B. SHANKARA RAO.—We have to get the factual information from several officers. It may be taken up after four or five days.

ಮಾನವಿಗಳು

ಶ್ರೀ ಪಂಪಾಪತಿ.—ಸ್ವಾಮಿ, ನಾನು ಮೊನ್ನೆ ದಿವಸ ತಾನೇ ಹೇಳಿದ್ದೇನೆ ಪೋಲೀಸರು ವಕೀಲರೊಬ್ಬರಿಗೆ ಹೊಡೆದು ಗಾಯಗೊಳಿಸಿದ್ದಾರೆ. ಇದನ್ನು ತಮ್ಮ ಗಮನಕ್ಕೂ ಕೂಡ ನೋಟೀಸ್ ಮೂಲಕ ತಂದಿದ್ದೇನೆ. ಸರ್ಕಾರದವರಿಂದ ನನಗೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ರಿಪೋರ್ಟ್‌ಗೋಸ್ಕರ ನಾವು ಸರ್ಕಾರದವರನ್ನು ಕೇಳಿದ್ದೇವೆ ಅದು ಇನ್ನೂ ಬಂದಿಲ್ಲ.

ಶ್ರೀ ಪಂಪಾಪತಿ.—ಇದು ಯಶವಂತಪುರದಲ್ಲಿ ಆಗಿರತಕ್ಕಂಥ ಘಟನೆ. ಒಬ್ಬ ವಕೀಲರನ್ನು ಪೋಲೀಸರು ಹೊಡೆದಿದ್ದಾರೆ. ವಕೀಲರನ್ನೇ ಹೊಡೆದಿರಬೇಕಾದರೆ ಇನ್ನು ಸಾಮಾನ್ಯರ ಗತಿ ಏನು ಸ್ವಾಮಿ ?

ಶ್ರೀ ಮೈಕೇಲ್ ಫರ್ನಾಂಡಿಸ್.—ಸ್ವಾಮಿ ನನ್ನದೊಂದು ವಿಚಾರ ಇದೆ. ಪೋಲೀಸರು ಹೋಟೆಲ್ ಕಾರ್ಮಿಕರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಈ ಬಗ್ಗೆ ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೇನೆ.

ಅಧ್ಯಕ್ಷರು.—ಇವತ್ತು ಒಂದು ಗಂಟೆ ಮುಂಚಿತವಾಗಿ ಇದು ಬಂದಿರುತ್ತದೆ. ಇದನ್ನು ನಾನು ನೋಡಿಸುತ್ತೇನೆ. ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳಿದ ವಿಚಾರದಲ್ಲಿ ನಾವು ರಿಪೋರ್ಟ್ ಕೇಳಿದ್ದೇವೆ. ಅದು ಬಂದಿದೆಯೋ ಇಲ್ಲವೋ ನೋಡಿಸುತ್ತೇನೆ.

ಶ್ರೀಮತಿ ಎಸ್. ಪ್ರಮಿಳ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಗಂಗಾಧರನ್ ಅವರು ಎತ್ತಿರತಕ್ಕಂಥ ವಿಚಾರದಲ್ಲಿ ನಾನು ಅದರ ಬಗ್ಗೆ ನೋಟೀಸ್ ಕೊಟ್ಟಿಲ್ಲ, ಆದರೂ ಒಂದು ವಿಚಾರ ಹೇಳುತ್ತೇನೆ. ಆ ಹಾಸ್ಪಲ್‌ನಲ್ಲಿರತಕ್ಕಂಥ ಹೆಣ್ಣುಮಕ್ಕಳಿಗೆ ಎಲೆಕ್ಟ್ರಿಸಿಟಿ ಕಟ್ ಮಾಡಿ ನೀರು ಇಲ್ಲದೇ ತುಂಬಾ ತೊಂದರೆಯಾಗುತ್ತಾ ಇದೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಸದಸ್ಯರು ಹೇಳಿದಹಾಗೆ ಆ ಮಕ್ಕಳಿಗೆ ನೀರಿನ ವ್ಯವಸ್ಥೆ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ತಾವು ಅಪ್ಪಣೆ ಕೊಟ್ಟರೆ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಆ ವಿದ್ಯಾರ್ಥಿಗಳು ನನ್ನ ಹತ್ತಿರ ಬಂದರು. ನಾನು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರನ್ನು ನೋಡಿ ಎಂದು ಹೇಳಿದೆ. ಅವರು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರನ್ನು ಕಂಡರು. ಅವರು ಅರ್ಜೆಂಟಾಗಿ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್‌ರವರಿಗೆ ಫೋನ್‌ಮಾಡಿ ನೀರಿನ ವ್ಯವಸ್ಥೆ ಮತ್ತು ಲೈಟ್ ವ್ಯವಸ್ಥೆ ಮಾಡಿಸುವುದಕ್ಕೆ ಹೇಳಿದರು. ಅವರೆಲ್ಲಾ ಮತ್ತೆ ನನ್ನ ಹತ್ತಿರ ಬಂದಮೇಲೆ ನಾನೂ ಕೂಡ ಪತ್ರ ಬರೆದು ತಿಳಿಸಿದ್ದೇನೆ. ನಾನು ಪತ್ರ ಬರೆದು ೮ ದಿವಸವಾಯಿತು ಇನ್ನೂ ಯಾವುದೇ ವ್ಯವಸ್ಥೆ ಮಾಡಿಲ್ಲ.

ಅಧ್ಯಕ್ಷರು.—ಬೇಗ ಅಲ್ಲಿ ನೀರಿನ ವ್ಯವಸ್ಥೆ ಮಾಡಿಸಿ.

SRI G. B. SHANKARA RAO.—Sir, Electricity has been restored and we have requested the Corporation authorities to supply water also.

ಶ್ರೀ ಎಚ್. ಗಂಗಾಧರನ್ —ಅವರೆಲ್ಲಾ ಟ್ರಿಸ್‌ಪಾಸರ್ಸ್ ಎಂದು ಹೇಳಿ ಅವರನ್ನು ಹೊರಕ್ಕೆ ಹಾಕುತ್ತೇವೆ ಎಂದು ಹೆದರಿಸುತ್ತಿದ್ದಾರೆ. Let them not be disturbed.

SRI G. B. SHANKARA RAO.—I will make a statement. The inmates are still there. They are not forced out.

SRI S R. BOMMAI.—They are still there. ನೀವು ಬೇಗ ಆ ಬಗ್ಗೆ ವ್ಯವಸ್ಥೆ ಮಾಡಿಸಿ.

FINANCIAL BUSINESS

Discussion on

VOTING OF DEMANDS FOR GRANTS FOR 1982-83

DEMAND No. 54

SRI H. C. SRIKANTAIAH (Minister for Co-operation).—Sir on the recommendation of the Governor, I beg to move:

"That a sum not exceeding Rs. 13,42.28,000 on Revenue Account and Rs. 20,42,30,000 on Capital Account inclusive of the sum granted 'on account' be granted to the Govern-